*ಡಾ॥ ಆರ್. ನಾಗನಗೌಡ.—Intensive Development Block ಮಾಡಬೇಕಾದರೆ ಇದರಲ್ಲಿ ನಾವು 7,50,000 ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಇದರಲ್ಲಿ ಎರಡುಮೂರು ಮುಖ್ಯವಾದ ಅಂಶಗಳಿವೆ. Personnel ಎಂದು ಇದೆ. ಅದರ ಬಗ್ಗೆ ಹೆಚ್ಚಾಗಿ ಹೇಳಬೇಕಾಗಿಲ್ಲ. ಎಲ್ಲ ಕಡೆಯೂ ಕೆಲಸ ಮಾಡುತ್ತಿದ್ದಾರೆ. Transport ವಿಷಯವೂ ಹಾಗೆಯೇ. ಮುಖ್ಯವಾಗಿ ಬರುವುದು local works. ಈ local works ಮಾಡುವುದರಲ್ಲಿ ನಮಗೆ ಜನರ ಸಹಕಾರ ಬೇಕಾಗುತ್ತದೆ. ಈ ಸಹಕಾರ ಎಲ್ಲಿ ಹೆಚ್ಚಾಗಿ ದೊರಕಿದೆಯೋ ಅಂಥಕಡೆ ಚೆನ್ನಾಗಿ ಕೆಲಸ ವಾಗಿದೆ ಎನ್ನುವುದು ಕಾರಣ. ಅನಂತರ Loans for providing short-term credits facilities ವಿಚಾರದಲ್ಲಿ ಎಷ್ಟು ಹಣವನ್ನು ರೈತರಿಗೆ ಸಾಲವಾಗಿ ಕೊಟ್ಟು ಪಾಪನು ತೆಗೆದುಕೊಂಡಿದ್ದಾರೆನ್ನುವುದು, it is an index of the quality and quantity of work that has been carried on there ಎಂದು ಹೇಳುತ್ತೇನೆ. ಇದನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಆ ತರುವಾಯ Loans in respect of minor irrigation works. ಇದರೊಳಗೆ minor irrigation works ಎಷ್ಟು ಮಾಡಿದ್ದಾರೆ, ಅವನ್ನು ಮಾಡುವುದರಲ್ಲಿ ಒಂದು ವಿಷಯವೇನಿದೆ ಎಂದರೆ ಜನರು ಮುಂದೆ ಬಂದು ಸಾಲತೆಗೆದುಕೊಂಡು ಕೃಷಿಗೆ ನೀರನ್ನು ಒದಗಿಸಲು ಹೆಚ್ಚಿಗೆ ಖರ್ಚು ಮಾಡುತ್ತಿದ್ದಾರೆಯೇ ಎನ್ನುವುದು. ಈ important considerations ಇವೆ. ಇದರ ಜೊತೆಗೆ physical target ಅಂದರೆ ಒಟ್ಟು ಪೊತ್ತ, ಎಷ್ಟು ಮೈಲಗಳ ರಸ್ತೆ ಮಾಡಿದ್ದಾರೆ, ಎಷ್ಟು ರಸ್ತೆಗಳನ್ನು ಪೂರಾಡಿದ್ದಾರೆ ಎಂಬುದನ್ನೆಲ್ಲಾ ನೋಡುತ್ತೇವೆ. ಇದರ ಮೇಲೆ, we try to judge.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ತಾವು ಈಗ ಏನೇನು ಅಂಶಗಳನ್ನು ಹೇಳಿದಿರೋ ಅದರ ಪ್ರಕಾರ ಈ ವರ್ಷ ಮೊದಲು ಒಂದರಿಂದ ಮೂರರವರೆಗಿನ ಬ್ಲಾಕುಗಳು ಯಾವಾಗ ಬರುತ್ತವೆ ಎಂದು ಹೇಳುತ್ತೀರಾ?

ಡಾ॥ ಆರ್. ನಾಗನಗೌಡ.—ಈ ವಿಚಾರ ಪರಿಶೀಲನೆಯಲ್ಲಿದೆ. Targets ಇಟ್ಟುಕೊಂಡು ನೋಡುತ್ತಿದ್ದೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ವರ್ಷ ಬ್ಲಾಕುಗಳಲ್ಲಿ ಕೆಲಸ ನಡೆದಿರುವುದರಲ್ಲಿ ಅರಕಲಗೂಡು N.E.S. ಬ್ಲಾಕ್‌ನಲ್ಲಿ ತಾವು ಹೇಳಿರುವ local works, Loans for minor irrigation, Loans for providing short-term credits and labour contribution ಇವೆಲ್ಲದರಲ್ಲಿಯೂ ಕೂಡ ಮೊದಲನೆಯದಾಗಿ ಕೆಲಸವಾಗಿಲ್ಲವೆ?

ಡಾ॥ ಆರ್. ನಾಗನಗೌಡ.—ಅರಕಲಗೂಡು ಬ್ಲಾಕಿನಲ್ಲಿ ಕೆಲಸ ಚೆನ್ನಾಗಿ ಜರುಗಿದೆ. It is one of the blocks that has done good work. But, as I was saying, Sir, there were many other considerations which will have to be taken into account and then we will decide. C. P. ಯವರು ನಮಗೆ instructions ಕೊಟ್ಟು 1953-54ರ ಬ್ಲಾಕುಗಳಲ್ಲಿ ಇನ್ನೂ ಮೂರು ಉಳಿದಿವೆ. ಅವುಗಳಲ್ಲಿ ಎರಡು ಕೊಡಬೇಕು ಎಂದು ಹೇಳಿದ್ದಾರೆ; 1954-55ರ ಬ್ಲಾಕುಗಳಿಗೆ ನಾಲ್ಕು ಕೊಡಬೇಕು ಎಂದು ತಿಳಿಸಿದ್ದಾರೆ. ಆದಕಾರಣ 1954-55ರಲ್ಲಿ ಬ್ಲಾಕುಗಳನ್ನು ಕೇಳಿರುವ ಲಿಸ್ಟಿನಲ್ಲಿ we are selecting four blocks out of that.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ತಾವು local works, manual labour, loans for irrigation ಎಂದು ಹೇಳಿದಿರಲ್ಲ ಮೂರು ಮತ್ತು ನಾಲ್ಕನೆ ಐಟಂಗಳನ್ನು ಪರಿಶೀಲಿಸಿದರೆ ಅರಕಲಗೂಡು ಬ್ಲಾಕು ಮೊದಲನೆಯದಾಗಿ ಬರುತ್ತದೆಯಲ್ಲವೆ?

ಡಾ॥ ಆರ್. ನಾಗನಗೌಡ.—ಅಂಕಿಗಳೇ ತಮ್ಮ ಮುಂದೆ ಇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗಾದರೆ ಈ ವರ್ಷವೇ ಈ ಬ್ಲಾಕನ್ನು intensive block ಆಗಿ convert ಮಾಡುತ್ತೀರಾ?

Dr. R. NAGAN GOWDA.—We will keep that in mind.

ಶ್ರೀ ಜಿ. ಪಾಪಣ್ಣ.—ಈ ಬ್ಲಾಕುಗಳನ್ನು ತೀರ್ಮಾನ ಮಾಡುವವರು ಸಂಸ್ಥಾನ ಸರ್ಕಾರದವರೇ ಅಥವಾ C. P. ಅಡ್ಮಿನಿಸ್ಟ್ರೇಷನವರೇ?

ಡಾ॥ ಆರ್. ನಾಗನಗೌಡ.—C. P. ಯವರು ನಮಗೆ directive suggestions ಕೊಟ್ಟಿದ್ದಾರೆ. ಅದರ ಪ್ರಕಾರ ನಮ್ಮ ಸರ್ಕಾರದವರು ತೀರ್ಮಾನ ಮಾಡುತ್ತಾರೆ.

ಶ್ರೀ ಜಿ. ಪಾಪಣ್ಣ.—Short term credit ಕೊಡುವುದರಲ್ಲಿ N.E.S. ಬ್ಲಾಕ್‌ನವರು ತೀರ್ಮಾನ ಮಾಡಿ ಡಿಸ್ಟ್ರಿಕ್ಟ್ ಬ್ಯಾಂಕ್‌ನವರು ತೀರ್ಮಾನ ಮಾಡಬೇಕಾದರೆ ಇದರ ಅವಕಾಶವನ್ನು ಉಪಯೋಗಿಸಿಕೊಳ್ಳುವುದಕ್ಕೆ ನಿಧಾನವಾಗುವುದಿಲ್ಲವೆ?

ಡಾ॥ ಆರ್. ನಾಗನಗೌಡ.—ಆ ರೀತಿ ಏನೂ ತೋರುವುದಿಲ್ಲ.

National Extension Service Blocks (Number to be started).

Q.—358. Sri B. N. RAME GOWDA (Sira).—

Will the Government be pleased to state :—

(*a*) the number of N.E.S. blocks that have been sanctioned to this State for this year;

(*b*) the names of the N.E.S. blocks that are to be started in the State?

A.—Dr. R. NAGAN GOWDA (Minister for Agriculture).—

(*a*) Seven during 1955-56.

(*b*) The matter is under the consideration of Government.

---

* Asterisk indicates that the remarks or speeches have not been revised by the Member concerned.

ಶ್ರೀ ಬಿ. ಎಚ್. ರಾಮೇಗೌಡ.—1956-57ರಲ್ಲಿ ಎಷ್ಟು N. E. S. ಬ್ಲಾಕುಗಳನ್ನು ಇಲ್ಲಿಗೆ ಕೊಡ ರಾಗಿದೆ ?

*ಡಾ॥ ಆರ್. ನಾಗನಗೌಡ.—1956-57ಕ್ಕೆ ಆರು ಬ್ಲಾಕುಗಳನ್ನು ಕೊಟ್ಟಿದ್ದಾರೆ.

ಶ್ರೀ ಬಿ. ಎಚ್. ರಾಮೇಗೌಡ.—ಹೊಸದಾಗಿ N. E. S. ಬ್ಲಾಕುಗಳನ್ನು ಕೊಡಬೇಕಾದರೆ ಯಾವ ತತ್ವವನ್ನು ಅನುಸರಿಸುತ್ತೀರಿ ?

ಡಾ॥ ಆರ್. ನಾಗನಗೌಡ.—ಹತ್ತು ಜಿಲ್ಲೆಗಳಲ್ಲಿ ಯಾವುದಾದರೂ ಒಂದು ಕಡೆಯಲ್ಲಿ percentage of population, and area ಇವುಗಳನ್ನು ನೋಡಿ ಕೊಂಡು ಮೊದಲು ಬ್ಲಾಕುಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದಾದನಂತರ ಜಿಲ್ಲೆಯಲ್ಲಿ ಮೊದಲು ಕೊಟ್ಟಿರುವ ಬ್ಲಾಕಿನ ಪಕ್ಕದಲ್ಲಿ ಯಾವುದು ಇದೆಯೋ ಅಲ್ಲಿಗೆ, ಅನಂತರ ಅದರ ಪಕ್ಕದಲ್ಲಿ ಹೀಗೆ ಕೊಡುತ್ತೇವೆ.

ಶ್ರೀ ಬಿ. ಎಚ್. ರಾಮೇಗೌಡ.—ತುಮಕೂರು ಜಿಲ್ಲೆ ಬಹಳ ಹಿಂದುಳಿದಿರುವುದರಿಂದ ಅಲ್ಲಿಗೆ ಕೆಲವು ಬ್ಲಾಕು ಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಪೊನ್ನೆ ಅಕ್ಟೋಬರು ತಿಂಗಳಿನಲ್ಲಿ ಕೊಡುವಾಗ ಎರ್ಲಾ ಜಿಲ್ಲೆಗಳಿಗೂ ಎರಡೆರಡು ಬ್ಲಾಕುಗಳನ್ನು ಕೊಟ್ಟಾಗ ತುಮಕೂರಿಗೆ ಮೂರನ್ನು ಕೊಟ್ಟಿದ್ದೇವೆ. ಆದಕಾರಣ ತುಮಕೂರು ಜಿಲ್ಲೆಗೆ ಇನ್ನೊಂದು ಬ್ಲಾಕು ಕೊಟ್ಟರೆ ನಾಲ್ಕು ಆಗುತ್ತದೆ. ಉಳಿದ ಕಡೆಗಳಲ್ಲಿ ಎರಡೇ ಆಗುತ್ತದೆ. ಆದುದರಿಂದ ಏಪ್ರಿಲ್ ಒಂದನೆ ತಾರೀಖಿಗೆ ತುಮಕೂರು ಜಿಲ್ಲೆಗೆ ಒಂದು ಬ್ಲಾಕು ಕೊಡುವುದಕ್ಕೆ ಸಾಧ್ಯವಿಲ್ಲ ವೆಂದು ಹೇಳಬೇಕಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮಂತ್ರಿಗಳ ಎಲ್ಲ ಜಿಲ್ಲೆಗಳಲ್ಲಿಯೂ ಆಗಿದೆಯೋ, ಅಥವಾ ಯಾವುದಾದರೂ ಬಾಲ ಇದೆಯೋ ?

ಡಾ॥ ಆರ್. ನಾಗನಗೌಡ.—Information ಎಲ್ಲ ಪ್ರಿಂಟ್ ಮಾಡಿದ್ದೇವೆ. ಮಾನ್ಯ ಸದಸ್ಯರಿಗೂ ಒಂದು ಪ್ರತಿಯನ್ನು ಕೊಟ್ಟಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈಗ ನ್ಯಾಷನಲ್ ಎಕ್ಸ್‌ಟೆಂಷನ್ ಬ್ಲಾಕುಗಳು ಇರುವ ಕಡೆಗಿಂತ ಇನ್ನೂ ಹೆಚ್ಚಿಗೆ free labour ನಡೆದಿರುವ ಕಡೆ ಒಂದು ಬ್ಲಾಕು ಕೊಡುವುದಕ್ಕೆ ಸಾಧ್ಯವೇ ?

ಡಾ॥ ಆರ್. ನಾಗನಗೌಡ.—ಅದೂ ಒಂದು consideration ನಮ್ಮ ಮುಂದೆ ಇದೆ.

ಶ್ರೀ ಕೆ. ಲಕ್ಕಪ್ಪ.—ಮೊದಲು ಸೆಲೆಕ್ಟ್ ಮಾಡಿರುವ ಬ್ಲಾಕಿಗೆ contiguity ಆಗಿರುವುದನ್ನು ಅನಂತರ ಸೆಲೆಕ್ಟ್ ಮಾಡುತ್ತೇವೆಂದು ಹೇಳಿದಿರಿ. ಆದರೆ ಮೊದಲು ಸೆಲೆಕ್ಟ್ ಮಾಡಿರುವ starting block ನಿಂದ ಒಂದು ವರ್ಷ ಎಡಗಡೆ ಮತ್ತೊಂದು ವರ್ಷ ಬಲಗಡೆ ಹೀಗೆ ಬ್ಲಾಕುಗಳನ್ನು ಕೊಡುವ ಪದ್ಧತಿಯನ್ನು ಅನುಸರಿಸುತ್ತಿದ್ದೀರಾ ?

ಡಾ॥ ಆರ್. ನಾಗನಗೌಡ.—ಹೇಗಾದರೂ ಅದರ ಪಕ್ಕದಲ್ಲೇ ಕೊಟ್ಟಂತಾಯಿತಲ್ಲ.

ಶ್ರೀ ಕೆ. ಲಕ್ಕಪ್ಪ.—ಈ ತರಹ ಅನುಸರಿಸಿದರೆ that would be the right policy to adopt.

National Extension Service (Extension to Hoskote and Anekal Taluks).

Q.—596. Srmiathi LAKSHMIDEVI RAMANNA (Hoskote—Anekal).—

Will the Government be pleased to state :—

(*a*) the taluks to which the National Extension Scheme has been extended so far in the State ;

(*b*) whether the abovesaid scheme would be extended to Hoskote and Anekal Taluks during the year 1956-57?

A.—Dr. R. NAGAN GOWDA (Minister for Agriculture).—

(*a*) The following are the Taluks in which N.E.S. Blocks are now working :—

(1) Ramanagaram and Kanakapura.
(2) Nelamangala.
(3) Magadi.
(4) Krishnarajapet.
(5) Malavalli.
(6) Gundlupet.
(7) Hunsur.
(8) Holenarasipur.
(9) Arkalgud.
(10) Mudigere.
(11) Koppa and Narasimharajapura.
(12) Hosanagar.
(13) Harihar and Davangere.
(14) Holalkere.
(15) Siraguppa.
(16) Hospet and Bellary.
(17) Turuvekere.
(18) Tumkur and Gubbi.
(19) Chiknayakanahally.
(20) Sidlaghatta.
(21) Srinivasapur.

(*b*) The question of extending the Scheme to Hosakote and Anekal Taluks will be considered.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—(b) ಪ್ರಶ್ನೆಗೆ ಉತ್ತರವಾಗಿ "ಹೊಸಕೋಟೆ ಮತ್ತು ಆನೇಕಲ್ ತಾಲ್ಲೂಕುಗಳಿಗೆ, ಈ ಯೋಜನೆಯನ್ನು ಜಾರಿಗೆ ತರುವ ವಿಷಯವನ್ನು ಪರ್ಯಾಲೋಚನೆಗಾಗುವುದು" ಎಂದು ಹೇಳಿದೆ. ಕಳೆದ ಅಧಿವೇಶನದಲ್ಲಿ ಈ ವರ್ಷ ಹೊಸಕೋಟೆ ಮತ್ತು ಆನೇಕಲ್ ತಾಲ್ಲೂಕುಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರುವುದಾಗಿ ಮಂತ್ರಿಗಳು ಕಮಿಟ್ ಮಾಡಿಕೊಂಡಿಲ್ಲವೆ ?

*ಡಾ॥ ಆರ್. ನಾಗನಗೌಡ.—ಮಾಡುತ್ತೇವೆಂದು ಹೇಳಿದ್ದೆ, ಕಮಿಟ್ ಮಾಡಿಕೊಂಡಿಲ್ಲ.